ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24

ಆಯುಕ್ತರವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ:.23.07.2024

**ಸುತ್ತೋಲೆ**

ವಿಷಯ: ಯುವ ಕಣಜ ಪೋರ್ಟಲ್ ಮೂಲಕ ಯುವಜನರಿಗೆ ಸರ್ಕಾರದ ಯೋಜನೆಗಳ ಕುರಿತು ಮಾಹಿತಿ ಒದಗಿಸುವ ಬಗ್ಗೆ.

ಉಲ್ಲೇಖ : ರಾಜ್ಯ ಸರ್ಕಾರದ ಜಂಟಿ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಯುಸಕ್ರೀಇ/ಯುನಿ/33/ಯುಕ/2023-24 ದಿನಾಂಕ:20.07.2024

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ನಿಗಮ ಮಂಡಳಿಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ 540 ಕ್ಕೂ ಹೆಚ್ಚು ಯುವಜನ ಕೇಂದ್ರಿತ ಯೋಜನೆಗಳ ಒಂದು ಕಿರುಹೊತ್ತಿಗೆಯಾದ **ಯುವಜನ ಕಣಜವನ್ನು** ಈಗಾಗಲೇ ಹೊರತರಲಾಗಿದೆ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಯುವ ಸಂಬಂಧಿ ಯೋಜನೆಗಳ ಬಗ್ಗೆ ರಾಜ್ಯದ ಯುವಜನತೆಯು ಸಂಪೂರ್ಣವಾಗಿ ಸಮಗ್ರವಾಗಿ ನಿಖರವಾಗಿ ಮಾಹಿತಿಯನ್ನು ಪಡೆದುಕೊಂಡು ಆ ಯೋಜನೆಗಳಿಂದ ಅಗತ್ಯ ಅನುಕೂಲ ಲಾಭವನ್ನು ಪಡೆದು ಸದುಪಯೋಗಪಡಿಸಿಕೊಂಡು ಸಬಲೀಕರಣಗೊಳ್ಳಬೇಕೆಂಬುದೇ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಯುವ ಕಣಜ ಆಧಾರಿತ ಯುವ ಕೇಂದ್ರಿತ ವಿವಿಧ ಯೋಜನೆಗಳನ್ನು wed portal ಮತ್ತು App ಗಳಲ್ಲಿ ಸಂಯೋಜಿಸಿ ಯುವ ಸಂಘಗಳು ರಾಷ್ಟ್ರೀಯ ಸೇವಾ ಯೋಜನೆ ನೆಹರು ಯುವ ಕೇಂದ್ರ ಹಾಗೂ ಸಹಾಯವಾಣಿಯ ಮೂಲಕ ಯುವಜನರಿಗೆ ತಲುಪಿಸಿ ಉತ್ತಮ ಸೇವೆಗಳನ್ನು ಒದಗಿಸುವ ಬಗ್ಗೆ ಇಲಾಖೆಯ ಗುರಿ ಹೊಂದಿದೆ.

ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಯುವಜನರು ಯುವ ಕಣಜ ಪೋರ್ಟಲ್ (https://yuvakanaja.karnataka.gov.in) ನ ಬಳಕೆಯನ್ನು ವಿಸ್ತರಿಸಲು ಉದ್ದೇಶಿಸಲಾಗಿದ್ದು ಸದರಿ ಪೋರ್ಟಲ್ ಕುರಿತು ಪ್ರಚಾರ ಹಾಗೂ ಕೆಳಕಂಡ ಅಂಶಗಳಿಗೆ ನಿಮ್ಮ ಸಹಕಾರವನ್ನು ನೀಡುವಂತೆ ಕೋರುತ್ತ ತಮ್ಮನ್ನು ಹಾಗೂ ತಾವು ನಿಗಧಿಪಡಿಸಿದ ಅಧಿಕಾರಿಗಳನ್ನು ಶ್ರೀ ಪ್ರತಾಪ್ ಕೆ ಪರಾಶರ ರವರು ಭೇಟಿ ಮಾಡಲಿದ್ದು ತಮ್ಮ ಪೂರ್ಣ ಸಹಕಾರ ನೀಡಬೇಕಗಿ ಹಾಗೂ ಯುವ ಕಣಜ ಯೋಜನೆಯನ್ನು ರಾಜ್ಯಾಂದ್ಯಂತ ಇರುವ ಎಲ್ಲಾ ಯುವ ಜನರಿಗೆ ಸದರುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾದ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ. (ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರ ಲಗತ್ತಿಸಲಾಗಿದೆ)

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು
3. ಇ – ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂ: ಯುಸಕ್ರೀಇ/ಯುನಿ/33/ಯುಕ/2023-24

ಆಯುಕ್ತರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ
ಬೆಂಗಳೂರು, ದಿನಾಂಕ: 20/07/24

ಗೆ,

ನಿರ್ದೇಶಕರು
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ, ಬೆಂಗಳೂರು - 01.

ಮಾನ್ಯರೆ,

ವಿಷಯ: ಯುವ ಕಣಜ ಪೋರ್ಟಲ್ ಮೂಲಕ ಯುವಜನರಿಗೆ ಸರ್ಕಾರದ ಯೋಜನೆಗಳ ಕುರಿತ ಮಾಹಿತಿ ಒದಗಿಸುವ ಕುರಿತು.

*****

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ನಿಗಮ ಮಂಡಳಿಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ 540 ಕ್ಕೂ ಹೆಚ್ಚು ಯುವಜನ ಕೇಂದ್ರಿತ ಯೋಜನೆಗಳ ಒಂದು ಕಿರುಹೊತ್ತಿಗೆಯಾದ ಯುವಜನ ಕಣಜವನ್ನು ಈಗಾಗಲೇ ಹೊರತರಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಯುವ ಸಂಬಂಧಿ ಯೋಜನೆಗಳ ಬಗ್ಗೆ ರಾಜ್ಯದ ಯುವಜನತೆಯು ಸಂಪೂರ್ಣವಾಗಿ, ಸಮಗ್ರವಾಗಿ, ನಿಖರವಾಗಿ ಮಾಹಿತಿಯನ್ನು ಪಡೆದುಕೊಂಡು ಆ ಯೋಜನೆಗಳಿಂದ ಅಗತ್ಯ ಅನುಕೂಲ ಲಾಭವನ್ನು ಪಡೆದು ಸದುಪಯೋಗಪಡಿಸಿಕೊಂಡು ಸಬಲೀಕರಣಗೊಳ್ಳಬೇಕೆಂಬುದೇ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಯುವ ಕಣಜ ಆಧಾರಿತ ಯುವ ಕೇಂದ್ರಿತ ವಿವಿಧ ಯೋಜನೆಗಳನ್ನು web portal ಮತ್ತು App ಗಳಲ್ಲಿ ಸಂಯೋಜಿಸಿ ಯುವ ಸಂಘಗಳು, ರಾಷ್ಟ್ರೀಯ ಸೇವಾ ಯೋಜನೆ, ನೆಹರು ಯುವ ಕೇಂದ್ರ ಹಾಗೂ ಸಹಾಯವಾಣಿಯ ಮೂಲಕ ಯುವಜನರಿಗೆ ತಲುಪಿಸಿ ಉತ್ತಮ ಸೇವೆಗಳನ್ನು ಒದಗಿಸುವ ಬಗ್ಗೆ ಇಲಾಖೆಯು ಗುರಿ ಹೊಂದಿದೆ.

ಈ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಯುವಜನರು ಯುವ ಕಣಜ ಪೋರ್ಟಲ್ https://yuvakanaja.karnataka.gov.in) ನ ಬಳಕೆಯನ್ನು ವಿಸ್ತರಿಸಲು ಉದ್ದೇಶಿಸಲಾಗಿದ್ದು, ನಿಮ್ಮ ಇಲಾಖೆಯ ಮೂಲಕ ಸದರಿ ಪೋರ್ಟಲ್ ಕುರಿತು ಪ್ರಚಾರ ಹಾಗೂ ಕೆಳಕಂಡ ಅಂಶಗಳಿಗೆ ನಿಮ್ಮ ಸಹಕಾರವನ್ನು ನೀಡುವಂತೆ ಕೋರುತ್ತಾ ತಮ್ಮನ್ನು ಹಾಗೂ ತಾವು ನಿಗಧಿಪಡಿಸಿದ ಅಧಿಕಾರಿಗಳನ್ನು ಶ್ರಿ ಪ್ರತಾಪ್ ಕೆ ಪರಾಶರ್ ರವರು ಭೇಟಿ ಮಾಡಲ್ಲಿದ್ದು ತಮ್ಮ ಪೂರ್ಣ ಸಹಕಾರ ನೀಡಬೇಕಾಗಿ ಹಾಗೂ ಯುವ ಕಣಜ ಯೋಜನೆಯನ್ನು ರಾಜ್ಯಾದ್ಯಂತ ಇರುವ ಎಲ್ಲಾ ಯುವ ಜನರಿಗೆ ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಅಗತ್ಯವಾದ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಮ್ಮಲ್ಲಿ ಕೋರಿದೆ.

1. ನಿಮ್ಮ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳಿಗೆ ಕಳುಹಿಸಬಹುದಾದ ಸಂಬಂಧಿತ ಸಂವಹನವನ್ನು ರೂಪಿಸಲು ಭಾರತೀಯ ಆಡಳಿತ ಫೆಲೋ ಆದ ಶ್ರಿ ಪ್ರತಾಪ್ ಕೆ ಪರಾಶರ್, ಮೊಬೈಲ್ ಸಂಖ್ಯೆ +91 9845029676 ಇವರನ್ನು ತೊಡಗಿಸಿಕೊಳ್ಳುವುದು.
2. ಪ್ರೊಫೈಲ್ ರಚಿಸುವ ಮತ್ತು ಈ ಪೋರ್ಟಲ್ನಿಂದ ಕಾರ್ಯಕ್ರಮದ ಮಾಹಿತಿಯನ್ನು ಪಡೆಯುವ ಪ್ರಕ್ರಿಯೆಯ ಬಗ್ಗೆ ಯುವಕರಿಗೆ ಮಾರ್ಗದರ್ಶನ ನೀಡಲು ಶ್ರೀ ಪ್ರತಾಪ್ ಕೆ ಪರಾಶರ್, ಭಾರತೀಯ ಆಡಳಿತ ಫೆಲೋ ಆದ ಇವರಿಗೆ ಹಾಗೂ ಸದರಿ ಉದ್ದೇಶಗಳಿಗೆ ಸಂಪೂರ್ಣ ಸಹಕಾರ ನೀಡುವಂತೆ ಕೋರಿದೆ. ತಾಲ್ಲೂಕು /

ಜಿಲ್ಲಾ ಮಟ್ಟದಲ್ಲಿ ಆನ್ಲೈನ್ / ಆಫ್ಲೈನ್ ಅಧಿವೇಶನಗಳನ್ನು ತೆಗೆದುಕೊಳ್ಳುವರು. ಸದರಿ ಉದ್ದೇಶಗಳು ಹಾಗೂ ನಡವಳಿಯವರಿಗೆ ತಮ್ಮ ಸಂಪೂರ್ಣ ಸಹಕಾರ ನೀಡಲು ಕೋರಿದೆ.

ತಮ್ಮ ವಿಶ್ವಾಸಿ.

ಜಂಟಿ ನಿರ್ದೇಶಕರು (ಯು ಸೇ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ರಾಜ್ಯ ನಿರ್ದೇಶಕರು, ಎನ್.ಎಸ್.ಎಸ್ ಇವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ರಾಜ್ಯ ನಿರ್ದೇಶಕರು, ನೆಹರು ಯುವ ಕೇಂದ್ರ ಸಂಘಟನ್, ಗುರುನಾನಕ್ ಭವನ, ವಸಂತನಗರ, ಬೆಂಗಳೂರು.